ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2556/2022

ಚಾಸಾ:4 ಪ್ರಾಸಾ:4

ದಿನಾಂಕ: 30.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಂಜು ಮರಕಾಲ |
| ತಂದೆಯ ಹೆಸರು | : | ಕೊರಗ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ಗಾರೆ ಕೆಲಸ |
| ವಾಸ ಸ್ಥಳ | : | ಹೊನ್ನಾರಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನನಗೆ ಆರೋಪಿಯ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿ ನಿಪಿ-2 ರಿಂದ 4 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-2(ಸಿ) ರಿಂದ 4(ಸಿ) ಎಂದು ಗುರುತಿಸಲಾಯಿತು. ಬೇಳೂರಿನಲ್ಲಿ ಯಾರೋ ಬಿದಿದ್ದು , ಪೊಲೀಸರು ಸ್ಥಳಕ್ಕೆ ಬಂದಾಗ ನಾನು ಹಾಜರು ಇದ್ದು, ಕೆಲವು ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ. ಸಾಕ್ಷಿ ನಿಪಿ-5 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-6ನ್ನು ನೋಡಿ ಗುರುತಿಸಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿ:27.08.2022 ರಂದು ಮಧ್ಯಾಹ್ನ 1 ಗಂಟೆ ಸಮಯಕ್ಕೆ ಬೇಳೂರು ಗ್ರಾಮದ ಮುಳ್ಳುಗುಡ್ಡೆಯಿಂದ ಸ್ವಲ್ಪ ಮುಂದೆ ಗಣಪತಿ ದೇವಸ್ಥಾನದ ಹತ್ತಿರ ನನ್ನ ಎದುರಿನಲ್ಲಿ ಪಲ್ಸರ್ ವಾಹನ ನಂ.ಕೆಎ-20/ಇವಿ-5282 ದ್ವಿಚಕ್ರ ವಾಹನವನ್ನು ಆರೋಪಿ ಹೆಂಡತಿ ಶಾಂಭವಿ ಹಾಗೂ ಮಗು ಶ್ರೇಣಿಕಾ ಎಂಬುವವರೊಂದಿಗೆ ಅತೀವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸು ಬರುತ್ತಿದ್ದು, ರಸ್ತೆಯಲ್ಲಿದ್ದ

ಹಾವು ನ್ನು ನೋಡಿ ಬ್ರೇಕ್ ಹಾಕಿದ ಪರಿಣಾಮ ಮೋಟಾರು ಸೈಕಲ್ ಸವಾರರೆಲ್ಲರೂ ರಸ್ತೆಗೆ ಬಿದಿದ್ದು, ಹಿಂಬದಿ ಸವಾರರಾದ ಶಾಂಭವಿಗೆ ತಲೆಗೆ, ಭುಜಕ್ಕೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಅವರನ್ನು ಆರೋಪಿ ಮತ್ತು ಮಗುವಿನೊಂದಿಗೆ ಎನ್. ಆರ್ ಆರ್ಚಾಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ.

ಪೊಲೀಸರು ಘಟನಾ ಸ್ಥಳಕ್ಕೆ ದಿಃ30.08.2022 ರಂದು ಭೇಟಿ ನೀಡಿದಾಗ ಚಾಸಾ-1ರವರು ಸ್ಥಳವನ್ನು ತೋರಿಸಿದ್ದು,  ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಬೆಳಿಗ್ಗೆ  10 ರಿಂದ 10-30ರವರೆಗೆ ಪಂಚನಾಮೆ ಮತ್ತು ನಕ್ಷೆ ತಯಾರಿಸಿ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿ ಮೇಲೆ ಹೇಳಿದ ವಾಹನವನ್ನು ಠಾಣೆಗೆ ತಂದು ಹಾಜರುಪಡಿಸಿದ್ದು, ಅದನ್ನು 11.15 ರಿಂದ 11.45ರವರೆಗೆ ವಶಕ್ಕೆ ಪಡೆದು ಪೋಟೋ ತೆಗೆದು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ನಾನು ಸದ್ರಿ ಪ್ರಕ್ರಿಯೆಗೆ ಸಹಕರಿಸಿದ್ದು ಅಪಘಾತದ ಹಿನ್ನೆಲೆ ತಿಳಿದಿದ್ದರೂ ಸಹ ಆರೋಪಿ ನನ್ನ ಪರಿಚಯಸ್ಥನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**